ಮುಸ್ಲಿಂ ವಸತಿ ಶಾಲೆಗಳು

ಬೆಂಗಳೂರು ಗ್ರಾ	ರಾಮನಗರ	1	ರಾಮನಗರ	6500
ಮಂಡ್ಯ	ಶ್ರೀರಂಗಪಟ್ಟಣ	2	ಶ್ರೀರಂಗಪಟ್ಟಣ	32500
ದಕ್ಷಿಣ ಕನ್ನಡ	ಮಂಗಳೂರು	3	ಕೋಟೆಕಾರ್	6500
ಗುಲ್ಬರ್ಗಾ	ಗುಲ್ಬರ್ಗಾ	4	ಗುಲ್ಬರ್ಗಾ	13000
ಬಿಜಾಪುರ	ಬಿಜಾಪುರ	5	ಬಿಜಾಪುರ	13000
	ಒಟ್ಟು			71500
	ಎಲ್ಲಾ ವಸತಿ ಶಾಲೆಗಳಿಗೂ ಒಟ್ಟು			4659500

1855(2346) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ): ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಎಲ್ಲೆಲ್ಲಿ ಪಶುವೈದ್ಯ ಆಸ್ಪತ್ರೆಗಳಿವೆ;

ಆ) ಸದರಿ ಆಸ್ಪತ್ರೆಗಳ ಪೈಕಿ ಸ್ವಂತ ಕಟ್ಟಡ ಹೊಂದಿರುವ ಆಸ್ಪತ್ರೆಗಳು ಯಾವುವು; ಹಾಗೂ ಸ್ವಮತ ಕಟ್ಟಡ ಹೊಂದದೇ ಇರುವ ಆಸ್ಪತ್ರೆಗಳು ಯಾವುವು;

ಇ) ಸ್ವಂತ ಕಟ್ಟಡಗಳಿಲ್ಲದ ಆಸ್ಪತ್ರೆಗಳಿಗೆ ಸ್ವಂತ ಕಟ್ಟಡ ನಿರ್ಮಿಸುವ ವಿಚಾರದಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಮಿರಾಜುದ್ದೀನ್ ಎನ್.ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) 1) ನಗರ ಪಶು ಆಸ್ಪತ್ರೆ, ಧನವಂತ್ರಿ ರಸ್ತೆ,

2) ರಾಜೇಂದ್ರ ನಗರ ಪಶು ಆಸ್ಪತ್ರೆ,

3) ಚಾಮುಂಡಿಪುರಂ ಪಶು ಆಸ್ಪತ್ರೆ,

4) ಕುಂಬಾರ ಕೊಪ್ಪಲು ಪಶು ಆಸ್ಪತ್ರೆ,

5) ಕನ್ನೇಗೌಡನ ಕೊಪ್ಪಲು ಪಶು ಆಸ್ಪತ್ರೆ.

ಆ) ಕನ್ನೇಗೌಡನ ಕೊಪ್ಪಲು ಪಶು ಆಸ್ಪತ್ರೆ ಹೊರತುಪಡಿಸಿ ಉಳಿದ ಎಲ್ಲಾ ಮೈಸೂರು ನಗರದಲ್ಲಿರುವ ಪಶು ಆಸ್ಪತ್ರೆಗಳಿಗೆ ಸ್ವಂತ ಕಟ್ಟಡ ಇರುತ್ತದೆ.

ಇ) ಮೈಸೂರು ನಗರಸಭೆ ಆಯುಕ್ತರನ್ನು ಪತ್ರದ ಮೂಲಕ ನಿವೇಶನವನ್ನು ಒದಗಿಸಲು ಕೋರಲಾಗಿದೆ.

1856(1791) ಶ್ರೀ ಶಿವಣ್ಣ ಜಿ. (ರಾಣೆಬೆನ್ನೂರು): ಮಾನ್ಯ ಕೈಗಾರಿಕೆ ಮತ್ತು ಮೂಲಭೂತ ಸೌಲಭ್ಯಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆ ಕೊಟ್ಟೂರು-ಹರಿಹರ ಹೊಸ ಬ್ರಾಡ್‌ಗೇಜ್‌ನ 67 ಕಿ.ಮಿ. ರೈಲು ಮಾರ್ಗದ ಯೋಜನೆಗೆ ಮಂಜೂರಾತಿ ದೊರೆತಿದೆಯೇ;

ಆ) ದೊರೆತ್ತಿದ್ದರೆ, ಯಾವಾಗ ಪ್ರಾರಂಭವಾಗುತ್ತದೆ;

ಇ) ಇದಕ್ಕೆ ಮಂಜೂರಾದ ಹಣವೆಷ್ಟು;